# 37. ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಕರಿಮನೆ

1. **ಶಾಲೆಯ ಹಿನ್ನೆಲೆ:–** ಈ ಶಾಲೆಯು 1949 ರಲ್ಲಿ ಸ್ಥಾಪನೆಗೊಂಡಿದ್ದು, ಕೊಡಚಾದ್ರಿ ತಪ್ಪಲಿನ ಮಲೆನಾಡಿನ ಮಡಿಲಲ್ಲಿ ಗ್ರಾಮೀಣ ಪ್ರದೇಶ ಹಾಗೂ ಶರಾವತಿ ಮುಳುಗಡೆ ಹಿನ್ನೀರಿನಿಂದ ಆವರಿಸಲ್ಪಟ್ಟಿದೆ. ಹಸಿರು ಕಾನನದ ನಡುವೆ ಮುಳುಗಡೆಯಿಂದ ಮುಕ್ತಿಗೊಂಡಿರುವ ಪ್ರದೇಶಗಳಿಂದ ಮಕ್ಕಳು ಶಾಲೆಗೆ ಬರುತ್ತಾರೆ. ಬಡತನದ ಹಿನ್ನೆಲೆಯನ್ನೇ ಹೊಂದಿದ ಕುಟುಂಬದಿಂದ ಮಕ್ಕಳು ಶಾಲೆಗೆ ಬರುತ್ತಿದ್ದು, ರಾಜ್ಯ, ರಾಷ್ಟ್ರ ಮಟ್ಟದ ತನಕ ಕ್ರೀಡೆ, ಜಾನಪದ ವಿಭಾಗ, ಶೈಕ್ಷಣಿಕವಾಗಿ ಸಾಧನೆಯನ್ನು ಮಾಡಿರುತ್ತಾರೆ. 500–600 ಮಕ್ಕಳು ಕಲಿಯುತ್ತಿದ್ದ ಈ ಶಾಲೆಯಲ್ಲಿ ದಾಖಲಾತಿಯು 35–40 ಕ್ಕೆ ಇಳಿಕೆಯಾದ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ, ಮೂಲಭೂತ ಕೊರತೆಯ ನಡುವೆಯೂ ಶಿಕ್ಷಕರ, ಎಸ್.ಡಿ.ಎಂ.ಸಿ., ಪೋಷಕರ ಪ್ರಯತ್ನದಿಂದ ದಾಖಲಾತಿಯನ್ನು ಹೆಚ್ಚಿಸಿಕೊಂಡು ತಾಲ್ಲೂಕಿನಲ್ಲಿ 2015–16 ನೇ ಸಾಲಿನಲ್ಲಿ "ಉತ್ತಮ ಶಾಲೆ" ಹಾಗೂ ಉತ್ತಮ ಎಸ್.ಡಿ.ಎಂ.ಸಿ. ಎಂಬ ಪ್ರಶಸ್ತಿಯನ್ನು ಪಡೆದುಕೊಂಡಿದೆ. ಈ ಸಾಲಿನಲ್ಲಿ 4 ಜನ ಶಿಕ್ಷಕರು ಮತ್ತು 53 ಮಕ್ಕಳಿದ್ದಾರೆ.

2. **ಶಾಲೆಯಲ್ಲಿ ಕೈಗೊಂಡ ನಾವೀನ್ಯಯುತ ಚಟುವಟಿಕೆಗಳು :–**
   1. ಶಾಲೆಯ ಮುಂದೆ ಸುಂದರವಾದ ಹೂದೋಟ ಹಾಗೂ ಔಷಧಿವನ ನಿರ್ಮಾಣ
   2. ಶಾಲೆಯ 1 ರಿಂದ 7 ನೇ ತರಗತಿಯ ಎಲ್ಲಾ ಮಕ್ಕಳಿಗೆ ಕಂಪ್ಯೂಟರ್ ಶಿಕ್ಷಣ
   3. ಎಲ್ಲಾ ಮಕ್ಕಳಲ್ಲಿ ಓದುವ ಸಾಮರ್ಥ್ಯ ಹೆಚ್ಚಿಸುವ ದೃಷ್ಟಿಯಿಂದ ತೆರೆದ ಗ್ರಂಥಾಲಯ ವ್ಯವಸ್ಥೆ
   4. ಮಕ್ಕಳೇ ಸ್ವತಹ ಪ್ರಯೋಗವನ್ನು ಮಾಡಿ ಕಲಿಯಲು ಪ್ರಯೋಗಾಲಯ ವ್ಯವಸ್ಥೆ
   5. ಬೋಧನೆ ಪರಿಣಾಮಕಾರಿಯಾಗಲು ದೃಕ್ ಮಾಧ್ಯಮ ಸಹಕಾರಿಯಾದ್ದರಿಂದ ಸ್ಮಾರ್ಟ್‌ಕ್ಲಾಸ್ ಮೂಲಕ ಬೋಧನೆ
   6. ಶಾಲಾ ಶಿಕ್ಷಣದ ಜೊತೆಗೆ ದೈಹಿಕ ಸದೃಢತೆಯನ್ನು ಹೆಚ್ಚಿಸುವ ಸಲುವಾಗಿ 1 ರಿಂದ 7 ನೇ ತರಗತಿ ಮಕ್ಕಳಿಗೆ ಕರಾಟೆ ತರಬೇತಿ
   7. ದೂರದಿಂದ ಬರುವ ಮಕ್ಕಳಿಗೆ ಆಟೋ ವ್ಯವಸ್ಥೆ
   8. ಶಾಲಾ ಶಿಕ್ಷಕರು ಹಾಗೂ ಎಸ್. ಡಿ. ಎಂ. ಸಿ. ಯವರಿಂದ ಬಡಮಕ್ಕಳ ದತ್ತು ಸ್ವೀಕಾರ. ಅವರ ಶೈಕ್ಷಣಿಕ ವರ್ಷದ ಶಾಲಾ ಖರ್ಚು–ವೆಚ್ಚದ ನಿರ್ವಹಣೆ
   9. ನಲಿಕಲಿ ಕೊಠಡಿಯಲ್ಲಿ ಮಕ್ಕಳ ಕಲಿಕೆಗೆ ಅಗತ್ಯ ವೃತ್ತಾಕಾರದ ಮೇಜು ಮತ್ತು ಕುರ್ಚಿ ವ್ಯವಸ್ಥೆ. ಶಾಲಾ ಶಿಕ್ಷಕರಿಂದ ಗೋಡೆ ಬರಹ, ಚಿತ್ರ ರಚನೆ
   10. ಎಲ್ಲಾ ಪೋಷಕರನ್ನು 5 ಗುಂಪಾಗಿಸಿ ಪ್ರತಿ ಶನಿವಾರ ಶಾಲಾ ಭೇಟಿ ಹಾಗೂ ಶ್ರಮದಾನ ಕಾರ್ಯ ನಿರ್ವಹಣೆ
   11. 1 ರಿಂದ 7 ನೇ ತರಗತಿ ಮಕ್ಕಳಿಂದಲೇ ಶಾಲೆಯ ಎಲ್ಲಾ ಸಾಂಸ್ಕೃತಿಕ ಚಟುವಟಿಕೆಗಳ ನಿರ್ವಹಣೆ
   12. ಸಾಂಸ್ಕೃತಿಕ ವೇದಿಕೆ ನಿರ್ಮಿಸಿ, ಪ್ರತಿ ಶುಕ್ರವಾರ ಆಶುಭಾಷಣ, ಚರ್ಚಾಸ್ಪರ್ಧೆ, ನಾಟಕ, ಕ್ವಿಜ್, ಚಿತ್ರಕಲೆ ಸ್ಪರ್ಧೆ ನಿರ್ವಹಣೆ
   13. ಬೆಳಗಿನ ಪ್ರಾರ್ಥನೆಯನ್ನು 3 ದಿನ ಇಂಗ್ಲೀಷ್‌ನಲ್ಲಿ, 3 ದಿನ ಕನ್ನಡದಲ್ಲಿ ನಿರ್ವಹಣೆ
   14. ತಿಂಗಳಿಗೊಮ್ಮೆ ಸ್ಥಳೀಯ ವಿಜ್ಞಾನ ಶಿಕ್ಷಕರನ್ನು ಕರೆಸಿ ಪಠ್ಯದಲ್ಲಿನ ವಿಜ್ಞಾನ ಪ್ರಯೋಗಗಳ ಮಾದರಿ ಪ್ರಯೋಗ
   15. ಮಕ್ಕಳ ದಾಖಲಾತಿ ಕಡಿಮೆಯಾಗುತ್ತಿದ್ದುದನ್ನು ಕಂಡು 5 ವರ್ಷಗಳಿಂದ ಮಾರ್ಚ್ ತಿಂಗಳಲ್ಲೇ ಮಕ್ಕಳ ಮನೆ ಭೇಟಿ ಮಾಡಿ ಮನವೊಲಿಸಿ ಹೆಚ್ಚಿನ ದಾಖಲಾತಿ

3. **ಆರಂಭದಲ್ಲಿ ಎದುರಿಸಿದ ಸಮಸ್ಯೆಗಳು:–**
   1. ಪ್ರಾರಂಭದಲ್ಲಿ ಎದುರಿಸಿದ ಮುಖ್ಯ ಸಮಸ್ಯೆ ಹಣಕಾಸಿನ ಕೊರತೆ

2. ಗಿಡಗಳಿಗೆ ನೀರಿನ ಕೊರತೆ
3. ಪೋಷಕರ ಸಭೆಗಳಿಗೆ ಪೋಷಕರ ಗೈರುಹಾಜರಿ
4. ಅಸುರಕ್ಷಿತ ಹಾಗೂ ಹಾಳಾದ ಕೊಠಡಿಗಳು
5. ದಾಖಲಾತಿಯ ಕೊರತೆ
6. ಪೀಠೋಪಕರಣಗಳ ಕೊರತೆ

### 4. ಪರಿಹಾರಕ್ಕೆ ನಾವು ಕೈಗೊಂಡ ಕ್ರಮಗಳು:–

1. ಎಂ. ಎಲ್. ಎ. ಹಾಗೂ ತಾ. ಪಂ. ಅರ್ಜಿ ಸಲ್ಲಿಸಿ ಅದರಿಂದ ಅನುದಾನಗಳನ್ನು ಪಡೆಯಲಾಯಿತು.
2. ಜಿ. ಪಂ. ಗೆ ಅರ್ಜಿ ಸಲ್ಲಿಸಿ ಬೋರ್‌ವೆಲ್ ವ್ಯವಸ್ಥೆ ಮಾಡಿಸಿಕೊಂಡು ನೀರಿನ ವ್ಯವಸ್ಥೆ
3. ಗ್ರಾ. ಪಂ. ನೆರವಿನೊಂದಿಗೆ ಶಾಲಾ ಹೂದೋಟ ಹಾಗೂ ಔಷಧಿ ವನ ನಿರ್ಮಾಣ
4. ದಾಖಲಾತಿಗಾಗಿ ಶಿಕ್ಷಕ ವೃಂದ, ಎಸ್. ಡಿ. ಎಂ. ಸಿ. ಯವರಿಂದ ಮಾರ್ಚ್‌ನಲ್ಲಿ ದಾಖಲಾತಿ ಆಂದೋಲನ, ಪೋಷಕರ ಮನವೊಲಿಸಿ ಹೆಚ್ಚಿನ ದಾಖಲಾತಿ
5. ಶಾಸಕರ ಅನುದಾನಗಳಿಂದ ಅತ್ಯಾಕರ್ಷಕವಾಗಿ ಕೊಠಡಿ ದುರಸ್ಥಿ
6. ಪೋಷಕರ ನಿರಾಸಕ್ತಿಯನ್ನು ಗಂಭೀರವಾಗಿ ಪರಿಗಣಿಸಿ, ಅವರನ್ನು 5 ಗುಂಪಾಗಿಸಿ, ಗುಂಪು ಕೆಲಸಗಳಿಗೆ ಉತ್ತೇಜಿಸಲಾಯಿತು ಹಾಗೂ ಶಿಕ್ಷಕರು, ಪೋಷಕರು ಹಾಗೂ ಮಕ್ಕಳಿಂದ ಶಾಲೆಗೆ ಸುಣ್ಣ – ಬಣ್ಣ, ತರಕಾರಿ ಗಿಡ ಬೆಳೆಸುವುದು, ಗೋಡೆಯ ಮೇಲೆ ಚಿತ್ರ ರಚನೆ
7. ದಾನಿಗಳಿಂದ ಹಣ ಸಂಗ್ರಹಿಸಿ
   - ಶಾಲೆಗೆ ಟಿ. ವಿ. ಖರೀದಿ
   - ಕಂಪ್ಯೂಟರ್ ಖರೀದಿ
   - ಬೀರು, ಅಲ್ಮೇರಾ ಖರೀದಿ
   - ತೆರೆದ ಗ್ರಂಥಾಲಯ ವ್ಯವಸ್ಥೆ
   - ಗ್ರಂಥಾಲಯಕ್ಕೆ ಪುಸ್ತಕ ಖರೀದಿ
   - ಪ್ರಯೋಗಾಲಯಕ್ಕೆ ವಸ್ತುಗಳ ಖರೀದಿ
8. ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ಪೀಠೋಪಕರಣ ಖರೀದಿ

### 5. ದಾನಿಗಳು:–

- ಶ್ರೀ ರಮೇಶ ಕೆ. ಆರ್., ಹಳೆ ವಿದ್ಯಾರ್ಥಿಗಳು
- ಸಿಸ್ಕೋ ಸಂಸ್ಥೆ, ಬೆಂಗಳೂರು
- ಪೋಷಕರು, ಗ್ರಾಮಸ್ಥರು, ಸಂಘ ಸಂಸ್ಥೆಗಳು, ಹಳೆ ವಿದ್ಯಾರ್ಥಿಗಳು

2018–19 ನೇ ಸಾಲಿನಲ್ಲಿ ದಾಖಲಾತಿಯನ್ನು ಹೆಚ್ಚಿಸಿಕೊಂಡು ನಲಿಕಲಿ ಮಕ್ಕಳಿಗೆ ಆಟೋಪಕರಣಗಳು, ಮಕ್ಕಳಿಗೆ ಆಟದ ಮೈದಾನ, ಶಾಲಾ ಮುಂಭಾಗದಲ್ಲಿ ಸರಸ್ವತಿ, ಗಾಂಧೀಜಿ, ವಿವೇಕಾನಂದರಂತಹ ಸಾಧಕರ ಮೂರ್ತಿ ಸ್ಥಾಪನೆ, ಸ್ಪೋಕನ್ ಇಂಗ್ಲೀಷ್ ತರಬೇತಿ, ಸಂಗೀತ ತರಬೇತಿಯಂತಹ ಯೋಜನೆ ಸಿದ್ಧವಾಗಿದ್ದು, ಕೆಲಸಗಳಿಗೆ ಚಾಲನೆಯನ್ನು ನೀಡಿದ್ದೇವೆ. ಈತನಕ ಸಹಕರಿಸಿದ ಎಲ್ಲರಿಗೂ ಅಭಿಮಾನಪೂರ್ವಕವಾಗಿ ಧನ್ಯವಾದಗಳನ್ನು ತಿಳಿಸುತ್ತೇವೆ.










AMAZON RIVER

